ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ

**ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗರಸ್ತೆ, ಕೆ.ಆರ್. ಸರ್ಕಲ್, ಬೆಂಗಳೂರು – 560001**

ಸಂಖ್ಯೆ : 7(8) ಪ್ರಾ.ಶಿ.ಅ/ಆರ್.ಟಿ.ಇ./ದಾಖಲಾತಿ/485/2015–16 ದಿನಾಂಕ : 18–02–2016

# ಸಾರ್ವಜನಿಕ ಪ್ರಕಟಣೆ

1. 2016–17ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅಡಿ ಪ್ರವೇಶ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ನಡೆಸಲಾಗುತ್ತಿದೆ. ಈ ಬಗ್ಗೆ ಕರ್ನಾಟಕ ಸರ್ಕಾರ ಹೊರಡಿಸಿರುವ ಆದೇಶ ಸಂಖ್ಯೆ: ಇಡಿ 51 ಪಿಜಿಸಿ 2016 (ಪಿ), ದಿನಾಂಕ 8–2–2016 ಹಾಗೂ ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿಯನ್ನು www.scholleducation.kar.nic.in ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.
2. ನೆರೆಹೊರೆಯಲ್ಲಿ ಇರುವ ಅಲ್ಪಸಂಖ್ಯಾತವಲ್ಲದ ಅನುದಾನರಹಿತ ಶಾಲೆಗಳಿಗೆ ಆ ಶಾಲೆಯಲ್ಲಿ ಪ್ರಾರಂಭಿಕ ತರಗತಿಯಾದ ಎಲ್.ಕೆ.ಜಿ. ಅಥವಾ 1ನೇ ತರಗತಿಗೆ ಪ್ರವೇಶ ಕೋರಿ ಪೋಷಕರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.
3. ನಗರ ಪ್ರದೇಶದಲ್ಲಿ ವಾರ್ಡ್‌ವ್ಯಾಪ್ತಿಯ ಪ್ರದೇಶವನ್ನು ನೆರೆಹೊರೆಯ ಪ್ರದೇಶವೆಂದು, ಗ್ರಾಮಾಂತರ ಪ್ರದೇಶದಲ್ಲಿ ಜನವಸತಿ ಪ್ರದೇಶದಿಂದ 1 ಕಿ.ಮೀ ವ್ಯಾಪ್ತಿಯ ಪ್ರದೇಶವನ್ನು ನೆರೆಹೊರೆಯ ಪ್ರದೇಶವೆಂದು ಸರ್ಕಾರ ಆದೇಶಿಸಿದೆ.
4. ಆರ್.ಟಿ.ಇ. ಅಡಿ ಪ್ರವೇಶ ಕೋರಲು ದಿನಾಂಕ : 0–6–2016ರಲ್ಲಿದ್ದಂತೆ ಎಲ್.ಕೆ.ಜಿ. ತರಗತಿಗೆ 3 ವರ್ಷ 10 ತಿಂಗಳಿನಿಂದ 4 ವರ್ಷ 10 ತಿಂಗಳು ಮತ್ತು 1ನೇ ತರಗತಿಗೆ 5 ವರ್ಷ 10 ತಿಂಗಳಿನಿಂದ 6 ವರ್ಷ 10 ತಿಂಗಳು ವಯೋಮಿತಿಯನ್ನು ಸರ್ಕಾರ ನಿಗದಿಪಡಿಸಿದೆ.
5. 2016–17ನೇ ಸಾಲಿನಲ್ಲಿ ಆಸಕ್ತ ಪೋಷಕರು ಆರ್.ಟಿ.ಇ. ಅಡಿ ಪ್ರವೇಶ ಕೋರಿ ನಿಗಧಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ ದಿನಾಂಕ 23–2–2016ರಿಂದ 15–3–2016ರವರೆಗೆ ಅರ್ಜಿ ಸಲ್ಲಿಸಬಹುದು.
6. ನೆರೆಹೊರೆಯಲ್ಲಿರುವ ಗರಿಷ್ಠ 5 ಶಾಲೆಗಳಿಗೆ ಆದ್ಯತೆ ಗುರುತಿಸಿ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸುವುದು. ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಸುವಂತಿಲ್ಲ.
7. ನೆರೆಹೊರೆಯಲ್ಲಿ ಸರ್ಕಾರಿ ಅಥವಾ ಅನುದಾನಿತ ಶಾಲೆ ಇದ್ದಲ್ಲಿ ನೆರೆಹೊರೆಯ ಹೊರಗಿನ ಶಾಲೆಗಳಿಗೆ ಆರ್.ಟಿ.ಇ. ಅಡಿ ಪ್ರವೇಶ ಕೋರಿ ಅರ್ಜಿ ಸಲ್ಲಿಸುವಂತಿಲ್ಲ.
8. ನೆರೆಹೊರೆಯನ್ನು ಗುರುತಿಸಲು ಮತದಾರರ ಗುರುತಿನ ಚೀಟಿ (EPIC Card) ಅಥವಾ ಆಧಾರ್‌ಕಾರ್ಡ್ (ADHAR Card) ಅಥವಾ ADHAR Card Acknowledgment Slip ಮಾತ್ರ ಪರಿಗಣಿಸಲಾಗುವುದು. ಪೋಷಕರು ಮೇಲ್ಕಾಣಿಸಿದ ವಾಸಸ್ಥಳ ದೃಢೀಕರಣ ಪತ್ರದಲ್ಲಿ ಇರುವ ವಿಳಾಸವನ್ನು ತಪ್ಪಿಲ್ಲದೇ ನಿಖರವಾಗಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸುವುದು.
9. ಅಂತರ್ಜಾಲ ಸೌಲಭ್ಯವಿಲ್ಲದ ಪೋಷಕರು ಮಗುವಿನ ಭಾವಚಿತ್ರ, ಜಾತಿ ದೃಢೀಕರಣ ಪತ್ರ, ಆದಾಯ ಪ್ರಮಾಣ ಪತ್ರ, ವಾಸ ಸ್ಥಳ ದೃಢೀಕರಣ ಪತ್ರ ಮುಂತಾದ ದಾಖಲೆಗಳ ಜೆರಾಕ್ಸ್ ಪ್ರತಿ ಹಾಗೂ ಮೂಲ ದಾಖಲೆಗಳೊಂದಿಗೆ ಸಂಬಂಧಿಸಿದ ನೆರೆಹೊರೆಯ ಶಾಲೆ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿಸಲು ತಿಳಿಸಲಾಗಿದೆ.
10. ಆನ್‌ಲೈನ್ ಮೂಲಕ ಅರ್ಜಿಗಳ ನೈಜತೆಯನ್ನು ತಂತ್ರಾಂಶದ ಮೂಲಕ ಪರಿಶೀಲಿಸಿ ದತ್ತಾಂಶ ತಾಳೆಯಾಗದಿದ್ದಲ್ಲಿ ಸಂಬಂಧಿಸಿದ ಪೋಷಕರಿಗೆ ದತ್ತಾಂಶ ಸರಿಪಡಿಸಲು ಎಸ್.ಎಮ್.ಎಸ್. ಮೂಲಕ ಸಂದೇಶ ಕಳುಹಿಸಲಾಗುವುದು. ನಿಗದಿತ ಸಮಯದೊಳಗೆ ಪೋಷಕರು ತಂತ್ರಾಂಶದ ಮೂಲಕ ತಾಳೆಯಾಗದ ಮಾಹಿತಿಯನ್ನು ನೇರವಾಗಿ ಸರಿಪಡಿಸಬಹುದು. ಅಥವಾ ತಂತ್ರಾಂಶದಲ್ಲಿ ಸರಿಪಡಿಸಲಾದ ತಪ್ಪು ಮಾಹಿತಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಭೇಟಿ ನೀಡಿ ಸರಿಪಡಿಸುವುದು.
11. ದಿನಾಂಕ 6–4–2016ರಂದು ಆನ್‌ಲೈನ್ ಲಾಟರಿ ಮೂಲಕ ಆಯ್ಕೆ ಮಾಡಿದ ಮಕ್ಕಳ ಪಟ್ಟಿಯನ್ನು ಪ್ರಕಟಿಸಲಾಗುವುದು.

**ಪೋಷಕರು ಮಕ್ಕಳನ್ನು ಅನುದಾನರಹಿತ ಶಾಲೆಗಳಲ್ಲಿ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಮೊದಲು ಈ ಕೆಳ ಕಾಣಿಸಿದ ಅಂಶಗಳನ್ನು ಗಮನಿಸಲು ಕೋರಲಾಗಿದೆ. ಶಾಲಾ ಮುಖ್ಯಸ್ಥರು ಪೋಷಕರಿಗೆ ಸದರಿ ಮಾಹಿತಿ ಒದಗಿಸಲು ತಿಳಿಸಲಾಗಿದೆ.**

1) ಶಾಲೆ ಪ್ರಾರಂಭಿಸಲು ಪಡೆದಿರುವ ಅನುಮತಿ ಪತ್ರದ ಆದೇಶದ ಪ್ರತಿ.
2) ಶಾಲೆ ಪ್ರಾರಂಭಿಸಲು ಅನುಮತಿ ಪಡೆದಿರುವ ತರಗತಿಗಳು ಮತ್ತು ಬೋಧನಾ ಮಾಧ್ಯಮದ ಆದೇಶದ ಪ್ರತಿ.
3) ಸಿಬಿಎಸ್ಇ ಅಥವಾ ಇತರೆ ಕೇಂದ್ರ ಪಠ್ಯಕ್ರಮದ ತರಗತಿ ನಡೆಸಲು ಸಂಬಂಧಿಸಿದ ಪ್ರಾಧಿಕಾರಕ್ಕೆ ಅಫಿಲಿಯೇಷನ್ ಪಡೆದಿರುವ ಆದೇಶದ ಪ್ರತಿ.
4) ಅಲ್ಪಸಂಖ್ಯಾತ ಶಾಲೆ ಆಗಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಘೋಷಣಾ ಪತ್ರದ ಆದೇಶದ ಪ್ರತಿ.
5) ಶಾಲೆಯಲ್ಲಿ ತರಬೇತಿ ಪಡೆದ ಶಿಕ್ಷಕರ ನೇಮಕಾತಿ ಮಾಹಿತಿ.
6) ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 2(ಬಿ) ಪ್ರಕಾರ ನಿಗಧಿ ಪಡಿಸಿರುವ ಬೋಧನಾ ಶುಲ್ಕದ ವಿವರ.
7) ಶಿಕ್ಷಣ ಹಕ್ಕು ಕಾಯಿದೆ ಸೆಕ್ಷನ್ 12(1)(ಸಿ) ಪ್ರಕಾರ ಶೇ 25ರ ಪ್ರಮಾಣದಲ್ಲಿ ಲಭ್ಯವಿರುವ ಒಟ್ಟು ಸೀಟುಗಳ ಸಂಖ್ಯೆ ಹಾಗೂ ಮೀಸಲಾತಿ ವಿವರ.
8) ಶಿಕ್ಷಕರ ಪೋಷಕರ ಸಂಘ ರಚಿಸಿರುವ ಬಗ್ಗೆ ಮಾಹಿತಿ.
9) ಮಕ್ಕಳ ಸುರಕ್ಷತಾ ಸಮಿತಿ ರಚಿಸಿರುವ ಬಗ್ಗೆ ಮಾಹಿತಿ.
10) ಮಕ್ಕಳ ಸುರಕ್ಷತೆಗೆ ತೆಗೆದುಕೊಂಡಿರುವ ಕ್ರಮಗಳ ಮಾಹಿತಿ.
11) ಶಿಕ್ಷಕರು ಹಾಗೂ ಸಿಬ್ಬಂದಿ ಬಗ್ಗೆ ಗೃಹ ಇಲಾಖೆಯಿಂತ ಪಡೆದುಕೊಂಡಿರುವ ಪರಿಶೀಲನಾ ಮಾಹಿತಿ.
12) ಪ್ರವೇಶ ಸಮಯದಲ್ಲಿ ಪ್ರವೇಶ ಪರೀಕ್ಷೆ ನಡೆಸದಿರುವ ಮಾಹಿತಿ.
13) ಮೂಲಭೂತ ಸೌಲಭ್ಯಗಳಾದ ಶಾಲಾ ಕೊಠಡಿ, ಗ್ರಂಥಾಲಯ, ಆಟದ ಮೈದಾನ, ಕುಡಿಯುವ ನೀರು, ಶೌಚಾಲಯ ಮುಂತಾದವು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಲಭ್ಯವಿರುವ ಮಾಹಿತಿ.

**ಇಲಾಖೆಯ ವೆಬ್‌ಸೈಟ್‌ನಲ್ಲಿ ಅಥವಾ ದಿನಪತ್ರಿಕೆಗಳಲ್ಲಿ ಇಲಾಖೆ ಪ್ರಕಟಿಸುವ ಅನಧಿಕೃತ ಶಾಲೆಗಳಿಗೆ ಅಥವಾ ತರಗತಿಗಳಿಗೆ ಮಕ್ಕಳನ್ನು ದಾಖಲು ಮಾಡದಂತೆ ಪೋಷಕರು ಎಚ್ಚರಿಕೆ ವಹಿಸಲು ಈ ಮೂಲಕ ತಿಳಿಯಪಡಿಸಲಾಗಿದೆ.**

20/2/16
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ,
1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಸೂಕ್ತ ಕ್ರಮಕ್ಕಾಗಿ

**ಹೆಚ್ಚಿನ ಮಾಹಿತಿಗಾಗಿ ಮತ್ತು ಯಾವುದೇ ಸಂದೇಹಗಳ ಪರಿಹಾರಕ್ಕಾಗಿ ಸಂಪರ್ಕಿಸಿ:**

**ಆರ್.ಟಿ.ಇ ಸಹಾಯವಾಣಿ (RTE HELPLINE):**

**0824–2437795,**
**ಪಡಿ ಮಂಗಳೂರು,**
**'ಗಣೇಶ್' ಕೊಲಾಸೊ ಆಸ್ಪತ್ರೆಯ ಬಳಿ,**
**2ನೇ ಅಡ್ಡ ರಸ್ತೆ, ಲೊವರ್ ಬೆಂದೂರ್,**
**ಕಂಕನಾಡಿ ಮಂಗಳೂರು, www.padivalored.com**

**ಹೆಚ್ಚಿನ ವಿವರಗಳಿಗೆ ಇಲಾಖೆ ವೆಬ್‌ಸೈಟ್ ನೋಡಿ : www.schooleducation.kar.nic.in, www.ssakarnataka.gov.in**
**ಶಿಕ್ಷಣ ಹಕ್ಕು ಕಾಯಿದೆ ಕುರಿತು ತಿಳಿಯಲು ಟೋಲ್‌ಫ್ರೀ ನಂ. 1800 4253 4567, ಮಕ್ಕಳ ಸಹಾಯವಾಣಿ : 1098**